# ವಿವೇಕವಿಲ್ಲದ ವರ

ಇದು ಬಹಳ ಹಿಂದಿನ ಕಥೆ; ಕೃತಯುಗದ್ದು.

ಒಂದು ಒಂಟೆಯಿತ್ತು. ಅದು ಒಮ್ಮೆ ಕಠಿಣವಾದ ತಪಸ್ಸಿಗೆ ತೊಡಗಿತು. ಒಂಟೆಯ ಕಠೋರ ತಪಸ್ಸಿಗೆ ಮೆಚ್ಚಿದ ಬ್ರಹ್ಮ ಅದರ ಮುಂದೆ ಪ್ರತ್ಯಕ್ಷನಾದ. 'ಏನು ವರ ಬೇಕೋ, ಕೇಳಿಕೋ' ಎಂದ. 'ಬ್ರಹ್ಮನೇ, ನನಗೆ ತುಂಬ ದೊಡ್ಡ ವರಗಳೇನೂ ಬೇಡ. ನನಗೊಂದು ಚಿಕ್ಕ ವರವನ್ನು ಕರುಣಿಸಿದರೆ ಸಾಕು. ನಾನು ಕುಳಿತ ಸ್ಥಳದಿಂದಲೇ ನನ್ನ ಆಹಾರವನ್ನು ಸಂಪಾದಿಸಬೇಕು. ಅದಕ್ಕಾಗಿ ನನ್ನ ಕತ್ತು ತುಂಬ ಉದ್ದವಾಗಬೇಕು. ಹೀಗಾಗಿ ನನ್ನ ಕತ್ತು ಉದ್ದವಾಗಿ ಬೆಳೆಯುವಂಥ ವರವನ್ನು ದಯಪಾಲಿಸು' ಎಂದು ಕೋರಿತು, ಒಂಟೆ.

ಬ್ರಹ್ಮ 'ತಥಾಸ್ತು, ಹಾಗೆಯೇ ಆಗಲಿ' ಎಂದು ವರ ನೀಡಿದ. ಒಂಟೆಗೆ ಅತೀವ ಸಂತಸವಾಯಿತು.

ಒಂಟೆಗೆ ಈಗ ಉದ್ದವಾದ ಕತ್ತಾಯಿತು. ಅದಕ್ಕೆ ಹಸಿವಾದಾಗ ಆಹಾರವನ್ನು ಹುಡುಕಿಕೊಂಡು ಹೋಗಬೇಕಾಗಿರಲಿಲ್ಲ; ಅದು ಕುಳಿತ ಜಾಗದಿಂದಲೇ ಅದರ ಉದ್ದವಾದ ಕತ್ತನ್ನು ಚಾಚುತ್ತಿತ್ತು. ದೂರದಲ್ಲಿದ್ದ ಆಹಾರವನ್ನು ಸುಲಭವಾಗಿ ಬಾಯಿಯೊಳಗೆ ತಂದುಕೊಳ್ಳುತ್ತಿತ್ತು. ಯಾವುದೇ ರೀತಿಯಲ್ಲೂ ಶ್ರಮ ಪಟ್ಟು ಆಹಾರವನ್ನು ಸಂಪಾದಿಸಿಕೊಳ್ಳಬೇಕಾದ ಅನಿವಾರ್ಯತೆ ಒಂಟೆಗೆ ಇಲ್ಲದೆ ಹೋದುದರಿಂದ ಅದು ಎದ್ದು ಓಡಾಡುವುದನ್ನೂ ನಿಲ್ಲಿಸಿ ಒಂದೇ ಕಡೆ ಇರಲು ತೊಡಗಿತು.

ಹೀಗೆ ಇರಲು ಒಂದು ದಿನ ಬಿರುಗಾಳಿ ಸಹಿತ ಜೋರಾಗಿ ಮಳೆ ಬಂತು. ಆ ಮಳೆ ಮತ್ತು ಗಾಳಿಯ ಅಬ್ಬರಕ್ಕೆ ಒಂಟೆಯೂ ತತ್ತರಿಸತೊಡಗಿತು. ಅದರ ತಲೆಯನ್ನು ರಕ್ಷಿಸಿಕೊಳ್ಳುವ ಉಪಾಯವಾಗಿ ಸಣ್ಣ ಗುಹೆಯಲ್ಲಿ ಅದರ ಕುತ್ತಿಗೆಯನ್ನು ಚಾಚಿ ಒಳನುಗ್ಗಿಸಿತು.

ಅದೇ ಸಮಯದಲ್ಲಿ ನರಿಯೊಂದು ಅದರ ಮರಿಗಳ ಸಮೇತ ಅದೇ ಗುಹೆಯನ್ನು ಹೊಕ್ಕಿತ್ತು. ನರಿಗೂ ಅದರ ಮರಿಗಳಿಗೂ ಹಸಿವು ತೀವ್ರವಾಗಿತ್ತು. ಗುಹೆಯ ಒಳಗೆ ಇದ್ದ ಒಂಟೆಯ ಕತ್ತನ್ನು ತಿನ್ನಲು ಅವು ಆರಂಭಿಸಿದವು. ಒಂಟೆ ನೋವಿನಿಂದ ಚೀರಲು ತೊಡಗಿತಾದರೂ ಅದಕ್ಕೆ ಗುಹೆಯ ಒಳಗಿನಿಂದ ಕತ್ತನ್ನು ಹೊರಗೆ ತೆಗೆದುಕೊಳ್ಳಲು ಸಾಧ್ಯವಾಗಲಿಲ್ಲ. ಕೊನೆಗೆ ಒಂಟೆ ಪ್ರಾಣವನ್ನು ಕಳೆದುಕೊಂಡಿತು.

★★★